ಬೀಳಗಿ ಕ್ಷೇತ್ರದ ಹಿರೇಪಡಸಲಗಿದ ಲಿಂಗಸೂರು ಹಾಗೂ ಗನಿ ಗ್ರಾಮಗಳಿಗೆ ಪಶು ಆಸ್ಪತ್ರೆಗಳ ಪ್ರಾರಂಭ

1131 (1305) ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-2003ನೇ ಸಾಲಿನಲ್ಲಿ ಹೊಸದಾಗಿ ಪಶು ಸಂಗೋಪನೆ ಆಸ್ಪತ್ರೆಗಳನ್ನು ಪ್ರಾರಂಭಿಸಲು ಸರಕಾರ ತೀರ್ಮಾನಿಸಿದೆಯೇ ?

ಆ) ಬೀಳಗಿ ಕ್ಷೇತ್ರದ ಹಿರೇಪಡಸಲಗಿದ ಲಿಂಗಸೂರು ಹಾಗೂ ಗನಿ ಗ್ರಾಮಗಳಿಗೆ ಪಶು ಆಸ್ಪತ್ರೆಗಳ ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಗ್ರಾಮಗಳಲ್ಲಿ 2002-2003ನೇ ಸಾಲಿನಲ್ಲಿ ಆಸ್ಪತ್ರೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಹೊಸದಾಗಿ ಪಶು ಆಸ್ಪತ್ರೆ ತೆರೆಯುವ ಕಾರ್ಯಕ್ರಮ ಸರ್ಕಾರದ ಮುಂದೆ ಇಲ್ಲ.

ಆ) ಪಶು ಆಸ್ಪತ್ರೆಗಳ ಬಗ್ಗೆ ಬೇಡಿಕೆಗಳು ಬಂದಿರುತ್ತದೆ.

ಇ) ಹೊಸದಾಗಿ ಪಶು ಆಸ್ಪತ್ರೆ ತೆರೆಯುವ ಕಾರ್ಯಕ್ರಮ ಸರ್ಕಾರದ ಮುಂದೆ ಇಲ್ಲ.

ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಬ್ಸಿಡಿ

1133 (1307) ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕೊಡಬೇಕಾದ ಸಬ್ಸಿಡಿ ಹಣದ ಬಾಕಿ ಮೊತ್ತರೆಷ್ಟು ?

ಆ) ಸಬ್ಸಿಡಿ ಮೊತ್ತರನ್ನು ಪೂರ್ಣವಾಗಿ ಯಾವಾಗ ಕೊಡಲಾಗುವುದು ?

ಇ) ನೇರವಾಗಿ ಹಣವನ್ನು ಕೊಡಲು ಸಾಧ್ಯವಾಗದಿದ್ದಲ್ಲಿ ಬಾಂಡ್‌ಗಳ ಮುಖಾಂತರ ವಾದರೂ ಸಬ್ಸಿಡಿ ಮೊತ್ತವನ್ನು ನೀಡಲು ಸರ್ಕಾರ ಪರಿಶೀಲಿಸುವುದೆ ?

ಈ) ನಿಶ್ಚಿತವಾಗಿ ಯಾವ ರೂಪದಲ್ಲಾದರೂ ಒಂದು ವರ್ಷದಲ್ಲಿ ಸಣ್ಣ ಕೈಗಾರಿಕೆಗಳಿಗೆ ಕೊಡುವ ಸಬ್ಸಿಡಿ ಬಾಕಿ ಮೊತ್ತವನ್ನು ಕೊಡುವ ಇಚ್ಛೆ ಸರ್ಕಾರಕ್ಕೆ ಇದೆಯೇ (ವಿವರ ಕೊಡುವುದು) ?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು):

ಅ) ದಿನಾಂಕ: 31-12-2002ರ ಅಂತ್ಯಕ್ಕೆ ರಾಜ್ಯದಲ್ಲಿ ರೂ. 309.90 ಕೋಟಿಗಳ ಸಹಾಯಧನ ಬಿಡುಗಡೆ ಮಾಡಲು ಬಾಕಿ ಇರುತ್ತದೆ.

ಆ) ಪೂರ್ಣ ಸಹಾಯಧನವನ್ನು ಬಿಡುಗಡೆ ಮಾಡಲು ಪ್ರಯತ್ನ ಮಾಡಲಾಗುತ್ತಿದೆ.

ಇ) ಪರಿಶೀಲನೆಯಲ್ಲಿದೆ.

ಈ) ಸಹಾಯಧನವನ್ನು ಬಿಡುಗಡೆ ಮಾಡಲು ಪ್ರಯತ್ನ ಮಾಡಲಾಗುತ್ತಿದೆ.

ಕೈಮಗ್ಗ ನೇಕಾರರಿಗೆ ನೂಲು ಸರಬರಾಜು

1134 (1308) ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ನಾಲ್ಕು ತಿಂಗಳಿಂದ ಕೈಮಗ್ಗ ನೇಕಾರರಿಗೆ ನೂಲು ಪೂರೈಕೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅ) ಬಂದಿದ್ದರೆ ಇವರ ಸಮಸ್ಯೆ ಬಗೆಹರಿಸಲು ಕೈಗೊಂಡ ಕ್ರಮಗಳೇನು ?

ಇ) ಇದುವರೆವಿಗೂ ಕ್ರಮ ಕೈಗೊಂಡಿರದಿದ್ದಲ್ಲಿ ಇನ್ನು ಎಷ್ಟು ದಿನಗಳಲ್ಲಿ ಇವರ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಲಾಗುವುದು ; ವಿವರ ನೀಡುವುದು ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ವಿಷಯ ಗಮನಕ್ಕೆ ಬಂದಿದ್ದು, ವಿದ್ಯಾ ವಿಕಾಸ ಯೋಜನೆಗೆ ಸರ್ಕಾರವು ರೂ.8.00 ಕೋಟಿಗಳನ್ನು ಪ್ರಸಕ್ತ ಸಾಲಿನಲ್ಲಿ ಹಾಗೂ 2003-04ನೇ ಸಾಲಿನಲ್ಲಿ ರೂ. 12.00 ಕೋಟಿಗಳನ್ನು ಮುಂಗಡವಾಗಿ ನೀಡಲು ನಿರ್ಧರಿಸಿದೆ. ಹಣ ಬಿಡುಗಡೆಯಾದ ನಂತರ ನೇಕಾರರಿಗೆ ನೂಲು ವಿತರಿಸಲು ಮತ್ತು ಪರಿವರ್ತನಾ ದರವನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು.

ಇ) ಮೇಲಿನಂತೆ ಕ್ರಮ ಕೈಗೊಂಡು ಸಾಧ್ಯವಾದಷ್ಟು ಬೇಗನೆ ಸಮಸ್ಯೆಯನ್ನು ಬಗೆಹರಿಸಲಾಗುವುದು.

ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಅನೇಕ ರಸ್ತೆಗಳು ಹಳ್ಳಿಗಳು ಜಲಾವೃತಗೊಂಡು ಗ್ರಾಮಸ್ಥರಿಗೆ ಯಾತ್ರಿಕ ದೋಣಿ ಸೌಲಭ್ಯ

1135 (1309) ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಅನೇಕ ರಸ್ತೆಗಳು ಹಾಗೂ ಹಳ್ಳಿಗಳು ಜಲಾವೃತಗೊಂಡು ಗ್ರಾಮಸ್ಥರಿಗೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಿನ್ನೀರಿನಿಂದ ಬಿದರಿ-ಬಬಲಾದಿ ಮಧ್ಯದಲ್ಲಿ ಯಾಂತ್ರಿಕ ದೋಣಿಯನ್ನು ಮಂಜೂರು ಮಾಡಲು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಾದಲ್ಲಿ, ಸುತ್ತ ಮುತ್ತಲಿನ ಹಲವಾರು ಗ್ರಾಮಗಳಿಗೆ ಅನುಕೂಲ ವಾಗುವಂತೆ ಇದೇ ಮಳೆಗಾಲದಲ್ಲಿ ಯಾಂತ್ರಿಕ ದೋಣಿಯ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಬಂದಿರುತ್ತದೆ.

ಆ) ಬಂದಿರುತ್ತದೆ.

ಇ) ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ನೀಡುವ ಶೇ. 90 ರಷ್ಟು ಅನುದಾನ ಉಪಯೋಗಿಸಿಕೊಂಡು ಆಲಮಟ್ಟಿ ಜಲಾಶಯದಿಂದ ಜಲಾವೃತಗೊಂಡ ಈ ಕೆಳಗಿನ ಪ್ರದೇಶದ ಜನರ ದಿನನಿತ್ಯದ ವ್ಯವಹಾರ ನಿರ್ವಹಿಸಲು ಅನುಕೂಲವಾಗುವಂತೆ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ ಯಾಂತ್ರಿಕ ನಾವೆ ತೊಡಗಿಸುವ ಬಗ್ಗೆ ವರದಿ ತಯಾರಿಸಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ವರದಿಯನ್ನು ಈಗಾಗಲೇ ಸಲ್ಲಿಸಲಾಗಿರುತ್ತದೆ. (ರೂ. 11.75 ಕೋಟಿ ಅಂದಾಜು).

1. ಮೈಸೂರು - ಶಿರಹಟ್ಟಿ
2. ಮಹಿಷವಾಡಗಿ - ಅಸಂಗಿ